# 172/25 – K

**Question Booklet Alpha Code**

**A**

**A**

| Question Booklet Sl. No. |
|---|
| |

**Total Number of Questions : 100** **Time : 90 Minutes**

**Maximum Marks : 100**

## INSTRUCTIONS TO CANDIDATES

1. The Question Paper will be given in the form of a Question Booklet. There will be four versions of Question Booklets with Question Booklet Alpha Code viz. **A, B, C** & **D**.
2. The Question Booklet Alpha Code will be printed on the top left margin of the facing sheet of the Question Booklet.
3. The Question Booklet Alpha Code allotted to you will be noted in your seating position in the Examination Hall.
4. If you get a Question Booklet where the alpha code does not match to the allotted alpha code in the seating position, please draw the attention of the Invigilator IMMEDIATELY.
5. The Question Booklet Serial Number is printed on the top right margin of the facing sheet. If your Question Booklet is un-numbered, please get it replaced by new Question Booklet with same alpha code.
6. The Question Booklet will be sealed at the middle of the right margin. Candidate should not open the Question Booklet, until the indication is given to start answering.
7. Immediately after the commencement of the examination, the candidate should check that the Question Booklet supplied to him/her contains all the 100 questions in serial order. The Question Booklet does not have unprinted or torn or missing pages and if so he/she should bring it to the notice of the Invigilator and get it replaced by a complete booklet with same alpha code. This is most important.
8. A blank sheet of paper is attached to the Question Booklet. This may be used for rough work.
9. **Please read carefully all the instructions on the reverse of the Answer Sheet before marking your answers.**
10. Each question is provided with four choices **(A), (B), (C)** and **(D)** having one correct answer. Choose the correct answer and darken the bubble corresponding to the question number using Blue or Black Ball Point Pen in the OMR Answer Sheet.
11. **Each correct answer carries 1 mark and for each wrong answer 1/3 mark will be deducted. No negative mark for unattended questions.**
12. No candidate will be allowed to leave the examination hall till the end of the session and without handing over his/her Answer Sheet to the Invigilator. Candidates should ensure that the Invigilator has verified all the entries in the Register Number Coding Sheet and that the Invigilator has affixed his/her signature in the space provided.
13. Strict compliance of instructions is essential. Any malpractice or attempt to commit any kind of malpractice in the Examination will result in the disqualification of the candidate.

A

1. ಕೆಳಗೆ ನೀಡಲಾದ ಘಟನೆಗಳ ಸರಿಯಾದ ಕಾಲಾನುಕ್ರಮವನ್ನು ಆಯ್ಕೆ ಮಾಡಿ.
   i. ಪ್ಯಾರಿಸ್‌ನಲ್ಲಿ ಬಾಸ್ಟಿಲ್ ಕೋಟೆಯ ಪತನ
   ii. ಬೋಸ್ಟನ್ ಟೀ ಪಾರ್ಟಿ ಘಟನೆ
   iii. ಮಾನವ ಹಕ್ಕುಗಳ ಫ್ರೆಂಚ್ ಘೋಷಣೆ
   A) ii, i, iii B) iii, i, ii C) ii, iii, i D) iii, ii, i

2. ಕೆಳಗಿನ ಘಟನೆಗಳಲ್ಲಿ ಯಾವುದು ಡಚ್‌ಗೆ ಸಂಬಂಧಿಸಿದೆ ?
   A) ಉದಯಂಪೆರೂರ್ ಸಿನೊಡ್ B) ಅಟ್ಟಿಂಗಲ್ ಗಲಭೆ
   C) ಕುರಿಚ್ಯ ಬಂಡಾಯ D) ಕುಲಾಚಲ್ ಕದನ

3. ಪೋಲವರಂ ಜಲ ಸಂರಕ್ಷಣಾ ಯೋಜನೆಯನ್ನು ಯಾವ ನದಿಗೆ ಅನುಷ್ಠಾನಗೊಳಿಸಲಾಗಿದೆ ?
   A) ಗೋದಾವರಿ B) ಕೃಷ್ಣಾ C) ನರ್ಮದಾ D) ಮಹಾನದಿ

4. ಗಾಜಾ ಯುದ್ಧದ ಕುರಿತು ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು/ವು ಸರಿಯಾಗಿದೆ/ವೆ ?
   i. ಗಾಜಾ ಯುದ್ಧವನ್ನು ಕೊನೆಗೊಳಿಸುವ ಶೃಂಗಸಭೆಯು ಈಜಿಪ್ಟ್‌ನ ಶರಮ್-ಅಲ್-ಶೈಖನಲ್ಲಿ ಅಕ್ಟೋಬರ್ 13, 2025 ರಂದು ನಡೆಯಿತು.
   ii. ಇದರ ಅಧ್ಯಕ್ಷತೆಯನ್ನು ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್-ಸಿಸಿ ವಹಿಸಿದ್ದರು.
   iii. ಶೃಂಗಸಭೆಯು ಒತ್ತೆಯಾಳುಗಳ ವರ್ಗಾವಣೆಯ ಕುರಿತು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ.
   A) i ಮತ್ತು ii ಮಾತ್ರ B) i ಮತ್ತು iii ಮಾತ್ರ
   C) ii ಮತ್ತು iii ಮಾತ್ರ D) ಈ ಎಲ್ಲಾ ಹೇಳಿಕೆಗಳು (i, ii ಮತ್ತು iii)

5. ಈ ಕೆಳಗಿನವುಗಳಲ್ಲಿ ಯಾವುದು/ವು ಸರಿಯಾದ ಜೋಡಿ(ಗಳು) ?
   i. ಹಿತಕಾರಿಣಿ ಸಮಾಜಂ – ವೀರೇಶಲಿಂಗಂ
   ii. ಸ್ವಾಭಿಮಾನ ಚಳುವಳಿ – ಇ. ವಿ. ರಾಮಸ್ವಾಮಿ ನಾಯ್ಕರ್
   iii. ಆರ್ಯ ಸಮಾಜ – ಸ್ವಾಮಿ ವಿವೇಕಾನಂದ
   A) i ಮಾತ್ರ B) i ಮತ್ತು iii ಮಾತ್ರ
   C) i ಮತ್ತು ii ಮಾತ್ರ D) ii ಮತ್ತು iii ಮಾತ್ರ

6. ಗಾಂಧೀಜಿಯವರ ಬಗೆಗಿನ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?
   i. ಚೌರಿ ಚೌರಾ ಘಟನೆಯ ಆನಂತರ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.
   ii. ಇಂಡಿಗೋ ರೈತರಿಗಾಗಿ ಚಂಪಾರಣ್‌ನಲ್ಲಿ ಪ್ರತಿಭಟನೆ ನಡೆದಿತ್ತು.
   iii. ಕ್ವಿಟ್ ಇಂಡಿಯಾ ಚಳುವಳಿ ದೆಹಲಿಯಲ್ಲಿ ಪ್ರಾರಂಭವಾಯಿತು.
   A) i ಮಾತ್ರ B) i ಮತ್ತು iii ಮಾತ್ರ
   C) ii ಮತ್ತು iii ಮಾತ್ರ D) ii ಮಾತ್ರ

7. ಭೂಮಿ, ಚಂದ್ರ ಮತ್ತು ಸೂರ್ಯ ಒಂದೇ ನೇರ ರೇಖೆಯಲ್ಲಿದ್ದಾಗ ಯಾವ ಉಬ್ಬರವಿಳಿತ ಸಂಭವಿಸುತ್ತದೆ ?
   A) ವಾವೂವೆಲಿ (Spring) ಉಬ್ಬರವಿಳಿತ
   B) ಸಪ್ತಮಿ ಉಬ್ಬರವಿಳಿತ
   C) ಕಡಿಮೆ ಉಬ್ಬರವಿಳಿತ
   D) ಮಿಶ್ರ ಉಬ್ಬರವಿಳಿತ

8. ಪರ್ಯಾಯ ದ್ವೀಪ ಪ್ರಸ್ಥಭೂಮಿಯಲ್ಲಿ ಅತ್ಯಂತ ಎತ್ತರದ ಶಿಖರ ಯಾವುದು ?
   A) ಆನಮುಡಿ
   B) ದೊಡ್ಡಬೆಟ್ಟ
   C) ಕಾಂಚನಜಂಗಾ
   D) ಎವರೆಸ್ಟ್

9. ಖಾದರ್ ಎಂಬುದು ಯಾವ ಮಣ್ಣಿನ ವಿಧದ ರೂಪಾಂತರವಾಗಿದೆ ?
   A) ಕಪ್ಪು ಮಣ್ಣು
   B) ಮೆಕ್ಕಲು ಮಣ್ಣು
   C) ಅರಣ್ಯ ಮಣ್ಣು
   D) ಕ್ಷಾರಯುಕ್ತ ಮಣ್ಣು

10. ವಾತಾವರಣದ ಆರ್ದ್ರತೆಯನ್ನು ಅಳೆಯುವ ಉಪಕರಣ ಯಾವುದು ?
   A) ಹೈಗ್ರೋಮೀಟರ್
   B) ಅನಿಮೋಮೀಟರ್
   C) ವಿಂಡ್ ವೇನ್
   D) ಥರ್ಮೋಮೀಟರ್

11. ಹಗಲಿನ ಸೂರ್ಯನ ಶಾಖದಿಂದ ಪರ್ವತದ ಇಳಿಜಾರಿನಲ್ಲಿ ಗಾಳಿಯ ವಿಸ್ತರಣೆಯಿಂದಾಗಿ ಕಣಿವೆಯಿಂದ ಪರ್ವತದ ತುದಿಗೆ ಗಾಳಿ ಬೀಸುತ್ತದೆ ಎಂಬುದು ಹೇಗೆ ತಿಳಿಯುತ್ತದೆ ?
   A) ಪರ್ವತ ತಂಗಾಳಿ
   B) ಕಣಿವೆ ತಂಗಾಳಿ
   C) ಸಮುದ್ರ ತಂಗಾಳಿ
   D) ಭೂಪ್ರದೇಶ ತಂಗಾಳಿ

12. 2025ರ ವಯಲಾರ್ ಸಾಹಿತ್ಯ ಪ್ರಶಸ್ತಿಯನ್ನು ಯಾರು ಪಡೆದಿದ್ದಾರೆ ?
   A) ಇ. ಸಂತೋಷ್ ಕುಮಾರ್
   B) ಅಶೋಕನ್ ಚೆರುವಿಲ್
   C) ಬೆನ್ಯಾಮಿನ್
   D) ಸುಭಾಷ್‌ಚಂದ್ರನ್

13. ವಸಾಹತುಶಾಹಿ ಆಳ್ವಿಕೆಯ ಸಮಯದಲ್ಲಿ ಭಾರತೀಯ ಆರ್ಥಿಕತೆಯ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ ?
   **ಹೇಳಿಕೆ 1 :** ಕೃಷಿ ವಲಯವು ಸ್ಥಗಿತಗೊಂಡಿತ್ತು.
   **ಹೇಳಿಕೆ 2 :** ಕೃಷಿಯಲ್ಲಿ ವಾಣಿಜ್ಯೀಕರಣವು ರೈತರನ್ನು ನಗದು (ವಾಣಿಜ್ಯ) ಬೆಳೆಗಳಿಂದ ಆಹಾರ ಬೆಳೆಗಳತ್ತ ಆಕರ್ಷಿಸಿತು.
   **ಹೇಳಿಕೆ 3 :** ಜಮೀನ್ದಾರಿ ವ್ಯವಸ್ಥೆಯು ಕೃಷಿ ಸ್ಥಗಿತತೆಗೆ ಪ್ರಮುಖ ಕಾರಣವಾಗಿತ್ತು.
   A) 1, 2 ಮತ್ತು 3ನೇ ಹೇಳಿಕೆಗಳು ಸರಿಯಾಗಿವೆ
   B) 1 ಮತ್ತು 2ನೇ ಹೇಳಿಕೆಗಳು ಸರಿಯಾಗಿವೆ
   C) 1 ಮತ್ತು 3ನೇ ಹೇಳಿಕೆಗಳು ಸರಿಯಾಗಿವೆ
   D) 2 ಮತ್ತು 3ನೇ ಹೇಳಿಕೆಗಳು ಸರಿಯಾಗಿವೆ

14. ಹಸಿರು ಕ್ರಾಂತಿಯ ಎರಡನೇ ಹಂತದ ಪ್ರಾರಂಭ
   A) 1960 ರ ಮಧ್ಯಭಾಗದಿಂದ 1970 ರ ಮಧ್ಯಭಾಗದವರೆಗೆ
   B) 1970 ರ ಮಧ್ಯಭಾಗದಿಂದ 1980 ರ ಮಧ್ಯಭಾಗದವರೆಗೆ
   C) 1960 ರಿಂದ 1980 ರ ವರೆಗೆ
   D) ಇವುಗಳಲ್ಲಿ ಯಾವುದೂ ಅಲ್ಲ

15. ಕೆಳಗೆ ನೀಡಲಾದ ಹೇಳಿಕೆಗಳಿಂದ, ಸರಿಯಾದವುಗಳನ್ನು ಗುರುತಿಸಿ.
   i. ವಿಶ್ವ ವ್ಯಾಪಾರ ಸಂಸ್ಥೆ (WTO) ಅನ್ನು 1991ರಲ್ಲಿ ಸ್ಥಾಪಿಸಲಾಯಿತು.
   ii. GATTನ ನಂತರ WTO ಅನ್ನು ರಚಿಸಲಾಯಿತು.
   iii. GATT ಅನ್ನು 1948 ರಲ್ಲಿ ಸ್ಥಾಪಿಸಲಾಯಿತು.
   A) i, ii, iii ಸರಿಯಾಗಿವೆ B) i, ii ಸರಿಯಾಗಿವೆ C) ii, iii ಸರಿಯಾಗಿವೆ D) i, iii ಸರಿಯಾಗಿವೆ

16. ಒಂದು ದೇಶದ ಆರೋಗ್ಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಬಳಸುವ ಸೂಚಕ
   A) ಶಿಶು ಮರಣ ಪ್ರಮಾಣ
   B) ಜೀವಿತಾವಧಿ
   C) ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ಉಪಸ್ಥಿತಿ
   D) ಇವೆಲ್ಲವೂ

17. ಯಾವ ಹೇಳಿಕೆಯು NITI ಆಯೋಗಕ್ಕೆ ಅನ್ವಯಿಸುವುದಿಲ್ಲ ?
   A) NITI ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದೆ
   B) ಸಹಕಾರಿ ಒಕ್ಕೂಟವನ್ನು ಒಳಗೊಂಡಿದೆ
   C) ಯೋಜನೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುತ್ತದೆ
   D) NITI ಆಯೋಗವು ತಾಂತ್ರಿಕ ನಾವೀನ್ಯದ ಮೂಲಕ ಯೋಜನೆಗಳು ಮತ್ತು ಉಪಕ್ರಮಗಳಿಗೆ ಒತ್ತು ನೀಡುತ್ತದೆ

18. ಭಾರತದ G20 ಅಧ್ಯಕ್ಷತೆಯ ವಿಷಯ (2023)
   A) ಒಂದು ದೇಶ, ಒಂದು ಕುಟುಂಬ, ಒಂದು ಭವಿಷ್ಯ
   B) ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ
   C) ಒಂದು ಭೂಮಿ, ಒಂದು ಭವಿಷ್ಯ , ಒಂದು ಜಗತ್ತು
   D) ಇವುಗಳಲ್ಲಿ ಯಾವುದೂ ಅಲ್ಲ

19. ಯಾವ ವರ್ಷದ ಸಾಂವಿಧಾನಿಕ ತಿದ್ದುಪಡಿಯು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿದೆ ?
   A) 2000 B) 2002 C) 2005 D) 2007

20. ಈ ಕೆಳಗಿನವುಗಳಲ್ಲಿ ತಪ್ಪಾದ ಹೇಳಿಕೆಯನ್ನು ಕಂಡು ಹಿಡಿಯಿರಿ.
   A) ಅನುಚ್ಛೇದ 38 – ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು
   B) ಅನುಚ್ಛೇದ 44 – ನಾಗರಿಕ ಕಾನೂನು
   C) ಅನುಚ್ಛೇದ 63 – ಭಾರತಕ್ಕೆ ಉಪರಾಷ್ಟ್ರಪತಿ
   D) ಅನುಚ್ಛೇದ 79 – ಸಂಸತ್ತಿನ ರಚನೆ

21. ಮಸೂದೆಯೊಂದು ಹಣದ ಮಸೂದೆಯೇ ಅಲ್ಲವೇ ಎಂದು ನಿರ್ಧರಿಸುವ ಅಧಿಕಾರ ಯಾರಿಗಿದೆ ?
   A) ಲೋಕಸಭಾ ಕಾರ್ಯದರ್ಶಿ B) ರಾಷ್ಟ್ರಪತಿ
   C) ಲೋಕಸಭಾ ಸ್ಪೀಕರ್ D) ಕ್ಯಾಬಿನೆಟ್

22. ಮಾಹಿತಿ ಸ್ವಾತಂತ್ರ್ಯ ಕಾಯಿದೆಯಡಿಯಲ್ಲಿ ಎಷ್ಟು ವರ್ಷಗಳ ಹಿಂದಿನ ಮಾಹಿತಿ ದೊರೆಯುತ್ತದೆ ?
A) 10 ವರ್ಷಗಳು B) 15 ವರ್ಷಗಳು C) 20 ವರ್ಷಗಳು D) 25 ವರ್ಷಗಳು

23. ನ್ಯಾಯಾಂಗ ಪರಿಶೀಲನೆಯ ಪರಿಕಲ್ಪನೆಯನ್ನು ಮೊದಲು ಪರಿಚಯಿಸಿದ ಪ್ರಕರಣ
A) ಪ್ರಿವೀ ಪರ್ಸ್ ರದ್ದತಿ ಪ್ರಕರಣ (abolition case) (1871)
B) ಮಾರ್ಬರಿ Vs. ಮ್ಯಾಡಿಸನ್ ಪ್ರಕರಣ (1803)
C) ಗೋಲಕನಾಥ್ ಪ್ರಕರಣ (1967)
D) ಕೇಶವಾನಂದ ಭಾರತಿ ಪ್ರಕರಣ (1973)

24. ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಗಳು ತಪ್ಪಾಗಿವೆ ?
i. ಭಾರತೀಯ ಸಂಸತ್ತು ಭಾರತೀಯ ಸಂವಿಧಾನದ ಭಾಗ VI ರಲ್ಲಿ ಒಳಗೊಂಡಿದೆ.
ii. ಭಾರತದ ರಾಷ್ಟ್ರಪತಿಗಳು ಲೋಕಸಭೆ ಅಥವಾ ರಾಜ್ಯಸಭೆಯ ಸದಸ್ಯರಲ್ಲ.
iii. ಭಾರತೀಯ ಸಂಸತ್ತು ಎರಡು ಶಾಸನಸಭೆಗಳುಳ್ಳ ಸಂಸ್ಥೆಯಾಗಿದೆ.
iv. ಪಾರ್ಲಿಮೆಂಟ್ ಎಂಬ ಪದವು ಇಂಗ್ಲೀಷಿನ ಪಾರ್ಲರ್ ಎಂಬ ಪದದಿಂದ ಬಂದಿದೆ.
A) ii, iii B) i, ii C) ii, iv D) i, iv

25. ಧಾರ್ಮಿಕ ಆಚರಣೆಗಳ ಬಗ್ಗೆ ನಿರ್ಧರಿಸುವ ಹಕ್ಕನ್ನು ಧರ್ಮಗಳಿಗೆ ನೀಡುವ ಅನುಚ್ಛೇದ
A) ಅನುಚ್ಛೇದ 25 B) ಅನುಚ್ಛೇದ 26 C) ಅನುಚ್ಛೇದ 27 D) ಅನುಚ್ಛೇದ 28

26. ಪ್ರೊರೋಗೇಶನ್ ಎಂದರೆ
A) ಒಂದು ಸಭೆ (sitting) ಕೊನೆಗೊಳ್ಳುತ್ತದೆ B) ಲೋಕಸಭೆಯನ್ನು ವಿಸರ್ಜಿಸುವುದು
C) ಕಲಾಪ (section) ಕೊನೆಗೊಳ್ಳುತ್ತದೆ D) ಇವುಗಳಲ್ಲಿ ಯಾವುದೂ ಅಲ್ಲ

27. ಈ ಕೆಳಗಿನ ಯಾವ ನಟ/ನಟಿಯನ್ನು ಪ್ರಸ್ತುತ ರಾಷ್ಟ್ರೀಯ ಸಂಕೇತವಾಗಿ ಭಾರತೀಯ ಚುನಾವಣಾ ಆಯೋಗವು ಮತದಾರರ ಜಾಗೃತಿಗಾಗಿ ಗುರುತಿಸಿದೆ ?
A) ವಿದ್ಯಾಬಾಲನ್ B) ಮಮ್ಮುಟ್ಟಿ
C) ರಜನಿಕಾಂತ್ D) ರಾಜ್‌ಕುಮಾರ್ ರಾವ್

28. ನಿರಾಮಯ ಆರೋಗ್ಯ ವಿಮಾ ಯೋಜನೆಯಡಿ ರಾಜ್ಯದಲ್ಲಿ ದೈಹಿಕ ಅಶಕ್ತರಿಗೆ ವಾರ್ಷಿಕ ಎಷ್ಟು ವೈದ್ಯಕೀಯ ನೆರವು ನೀಡಲಾಗುತ್ತದೆ ?
A) ಐವತ್ತು ಸಾವಿರ B) ಒಂದು ಲಕ್ಷ C) ಎರಡು ಲಕ್ಷ D) ಐದು ಲಕ್ಷ

29. ಎಂ.ಸಿ. ಜೋಸೆಫೈನ್ ಅವರಿಗಿಂತ ಮೊದಲು ಕೇರಳದಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದ ವ್ಯಕ್ತಿ ಯಾರು ?
A) ಅಡ್ವೊಕೇಟ್ ಪಿ. ಸತೀದೇವಿ B) ಶ್ರೀಮತಿ ಎಂ. ಕಮಲಂ
C) ನ್ಯಾಯಮೂರ್ತಿ ಶ್ರೀದೇವಿ D) ಶ್ರೀಮತಿ ಕೆ. ಸಿ. ರೋಸಕುಟ್ಟಿ

30. ಈ ಕೆಳಗಿನವುಗಳಲ್ಲಿ ಕೇರಳ ಸರಕಾರದ ಉಚಿತ ಕ್ಯಾನ್ಸರ್ ಚಿಕಿತ್ಸಾ ಯೋಜನೆ ಯಾವುದು ?
A) ಆರೋಗ್ಯ ಜಾಗೃತ B) ಆಯುರ್ದಲಮ್ C) ವರ್ಣಮ್ D) ಸುಕೃತಮ್

31. ಪಿ. ಸಚ್ಚಿದಾನಂದನ್ ಅವರ ಯಾವ ಕಾದಂಬರಿಯಲ್ಲಿ ಪಾತ್ರಗಳಿಗೆ ಹೆಸರನ್ನು ನೀಡಲಾಗಿಲ್ಲ ?
A) ಮರಣ ಸರ್ಟಿಫಿಕೇಟ್
B) ಜೈವ ಮನುಷ್ಯನ್
C) ಉತ್ತರಾಯಣಂ
D) ಆಳ್ಕೊಟ್ಟಂ

32. ಓಝೋನ್ ಪದರದ ಸವಕಳಿಗೆ ಮುಖ್ಯವಾಗಿ ಯಾವ ಅನಿಲ ಕಾರಣವಾಗಿದೆ ?
A) ಆಮ್ಲಜನಕ (oxygen)
B) ಕಾರ್ಬನ್ ಮೊನಾಕ್ಸೈಡ್
C) ಹೈಡ್ರೋಜನ್
D) ಕ್ಲೋರೋಫ್ಲೋರೋಕಾರ್ಬನ್

33. ಈ ಕೆಳಗಿನವುಗಳಲ್ಲಿ ಯಾವುದು ಜೀವನಶೈಲಿಯ ಕಾಯಿಲೆಯಲ್ಲ ?
A) ಕ್ಯಾನ್ಸರ್ B) ಮಲೇರಿಯಾ C) ಮಧುಮೇಹ D) ಅಧಿಕ ತೂಕ

34. ಮಾನವ ದೇಹದಲ್ಲಿ ಯಾವ ಅಂಗವು 'ಪಿತ್ತರಸ' ವನ್ನು ಉತ್ಪಾದಿಸುತ್ತದೆ ?
A) ಯಕೃತ್ತು B) ಸಣ್ಣ ಕರುಳು C) ಪಿತ್ತಕೋಶ D) ಮೂತ್ರಪಿಂಡ

35. 'ಸೂರ್ಯನ ಬೆಳಕಿನ ವಿಟಮಿನ್ (sunshine vitamin)' ಎಂದು ಯಾವ ವಿಟಮಿನನ್ನು ಕರೆಯಲಾಗುತ್ತದೆ ?
A) ವಿಟಮಿನ್ ಡಿ B) ವಿಟಮಿನ್ ಸಿ C) ವಿಟಮಿನ್ ಎ D) ವಿಟಮಿನ್ ಇ

36. 'ಗುಲಾಬಿ ರಿಬ್ಬನ್ (pink ribbon)' ಯಾವ ರೋಗದ ಬಗೆಗಿನ ಜಾಗೃತಿಯ ಸಂಕೇತವಾಗಿದೆ ?
A) ಏಡ್ಸ್ B) ಸ್ತನ ಕ್ಯಾನ್ಸರ್ C) ಕುಷ್ಠರೋಗ D) ಕೊರೋನಾ

37. ಕೇರಳ ಸರ್ಕಾರವು ಯಾವ ಮರಣೋತ್ತರ ಅಂಗಾಂಗ ದಾನ ಯೋಜನೆಯನ್ನು ಜಾರಿಗೆ ತಂದಿದೆ ?
A) ಅನನ್ಯಂ B) ಕಾರುಣ್ಯಸ್ಪರ್ಶಂ C) ಸಹಾಯಹಸ್ತಂ D) ಮೃತಸಂಜೀವಿನಿ

38. ಪಾಸ್ಕಲ್ ನಿಯಮವನ್ನು ಇದರಲ್ಲಿ ಬಳಸಲಾಗುತ್ತದೆ
A) ಸಿರಿಂಜ್‌ನ ಕಾರ್ಯಾಚರಣೆ
B) ಹೈಡ್ರಾಲಿಕ್ ಬ್ರೇಕ್‌ಗಳು
C) ದಂತವೈದ್ಯರ ಕುರ್ಚಿ
D) ಇವುಗಳೆಲ್ಲವೂ

39. ವಿದ್ಯುತ್ಕಾಂತೀಯ ಅಲೆಗಳ ಬಗ್ಗೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ ?
i. ಅವೆಲ್ಲವೂ ವಿಭಿನ್ನ ವೇಗಗಳನ್ನು ಹೊಂದಿವೆ.
ii. ಮೈಕ್ರೋವೇವ್‌ಗಳನ್ನು ಮೊಬೈಲ್ ಫೋನ್‌ಗಳಲ್ಲಿ ಬಳಸಲಾಗುತ್ತದೆ.
iii. ರೇಡಿಯೋ ತರಂಗಗಳು ಅವುಗಳ ವೇಗವನ್ನು ಬದಲಾಯಿಸುವ ಎಲೆಕ್ಟ್ರಾನ್‌ಗಳಿಂದ ಉತ್ಪತ್ತಿಯಾಗುತ್ತವೆ.
A) iii ಮಾತ್ರ
B) ii ಮತ್ತು iii
C) i ಮತ್ತು iii
D) i ಮತ್ತು ii

40. 20 kg ದ್ರವ್ಯರಾಶಿಯ ವಸ್ತುವು ನಿಶ್ಚಲತೆಯಿಂದ 20 m/s ವೇಗವನ್ನು ಪಡೆಯುತ್ತದೆ. ಈ ವಸ್ತುವಿನ ಮೇಲೆ ಘಟಿಸಿದ ಕಾರ್ಯ

A) 4000 J
B) – 4000 J
C) 2000 J
D) 400 J

41. ISRO 2 ನವೆಂಬರ್ 2025 ರಂದು ಕಕ್ಷೆಗೆ ಉಡಾಯಿಸಿದ CMS – 03 ಬಾಹ್ಯಾಕಾಶ ನೌಕೆಯ ಬಗ್ಗೆ ಸರಿಯಾದ ಉತ್ತರವನ್ನು ಆಯ್ಕೆಮಾಡಿ.

i. ಇದಕ್ಕಾಗಿ ಬಳಸಲಾದ ಉಡಾವಣಾ ರಾಕೆಟ್ LVM 3.
ii. ಇದು LVM 3 ರ ಮೂರನೇ ಕಾರ್ಯಾಚರಣೆಯ ಫ್ಲೈಟ್.
iii. ಇದೊಂದು ಸಂವಹನ ಉಪಗ್ರಹ.
iv. ಭಾರ (weight) ಕಡಿಮೆ ಇದ್ದ ಕಾರಣ ಉಡಾವಣೆ ಸುಲಭವಾಗಿತ್ತು.

A) i ಮತ್ತು iii
B) ii ಮತ್ತು iii
C) iii ಮತ್ತು iv
D) ಎಲ್ಲವೂ ಸರಿಯಾಗಿವೆ

42. ಮೂರು ಕ್ವಾಂಟಮ್ ಸಂಖ್ಯೆಗಳಿಂದ ವಿವರಿಸಲಾದ ಈ ಕೆಳಗಿನ ಯಾವ ಕಕ್ಷೆಗಳು ಕಾಂತೀಯ ಕ್ಷೇತ್ರದ ಅನುಪಸ್ಥಿತಿಯಲ್ಲಿ ಒಂದೇ ರೀತಿಯ ಶಕ್ತಿಯನ್ನು ಹೊಂದಿರುತ್ತವೆ ?

i. $n = 1 \quad l = 0 \quad m = 0$
ii. $n = 3 \quad l = 2 \quad m = 1$
iii. $n = 2 \quad l = 0 \quad m = 0$
iv. $n = 3 \quad l = 2 \quad m = 0$
v. $n = 2 \quad l = 1 \quad m = 0$

A) i ಮತ್ತು ii
B) ii ಮತ್ತು iii
C) ii ಮತ್ತು iv
D) iii ಮತ್ತು v

43. ಈ ಕೆಳಗಿನ ವ್ಯವಸ್ಥೆಗಳಲ್ಲಿ ಯಾವುದು ಅದರ ವಿರುದ್ಧ ಸೂಚಿಸಲಾದ ಗುಣಲಕ್ಷಣಕ್ಕೆ ಹೊಂದಿಕೆಯಾಗುವುದಿಲ್ಲ ?

A) Li < Na < K < Rb ಲೋಹೀಯ ತ್ರಿಜ್ಯದ ಏರಿಕೆ ಕ್ರಮ
B) B < C < N < O ಅಯಾನೀಕರಣ ಶಕ್ತಿಯ ಏರಿಕೆ ಕ್ರಮ
C) I < Br < F < Cl ಇಲೆಕ್ಟ್ರಾನ್ ಗಳಿಕೆಯ ಎಂಥಾಲ್ಪಿಯ ಏರಿಕೆ ಕ್ರಮ
D) $Al^{3+} < Mg^{2+} < Na^{+} < F^{-}$ ಅಯಾನಿಕ್ ಗಾತ್ರದ ಏರಿಕೆ ಕ್ರಮ

44. ಲೋಹದ ಸ್ಥಳಾಂತರ ಪ್ರತಿಕ್ರಿಯೆಗಳ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ ?

A) ಕಬ್ಬಿಣವು ತಾಮ್ರದ ಸಲ್ಫೇಟ್‌ನಿಂದ ತಾಮ್ರವನ್ನು ತೆಗೆದುಹಾಕುತ್ತದೆ
B) ಸತುವು ಮೆಗ್ನೀಸಿಯಮ್ ಸಲ್ಫೇಟ್‌ನಿಂದ ಮೆಗ್ನೀಸಿಯಮ್‌ಅನ್ನು ತೆಗೆದುಹಾಕುತ್ತದೆ
C) ತಾಮ್ರವು ಸೀಸದ ಸಲ್ಫೇಟ್‌ನಿಂದ ಸೀಸವನ್ನು ತೆಗೆದುಹಾಕುತ್ತದೆ
D) ಪಾದರಸವು ಸತು ಸಲ್ಫೇಟ್‌ನಿಂದ ಸತುವನ್ನು ತೆಗೆದುಹಾಕುತ್ತದೆ

45. 2025 ರ ರಸಾಯನಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ವಿಜೇತರ ಪಟ್ಟಿಯಲ್ಲಿ ಯಾರು ಒಳಗೊಂಡಿಲ್ಲ ?
A) ಸುಸುಮು ಕಿಟಗಾವಾ
B) ಒಮರ್ ಯಾಘಿ
C) ಜಾನ್ ಎಂ. ಮಾರ್ಟಿನಿಸ್
D) ರಿಚರ್ಡ್ ರಾಬ್ಸನ್

46. ಕೆಳಗಿನವುಗಳಲ್ಲಿ ಯಾವುದನ್ನು ಕಿಲಿಪಾಟು ವೃತಂ ಎಂದು ಕರೆಯಲಾಗುತ್ತದೆ ?
A) ತರಂಗಿಣಿ
B) ನಾಥೋನ್ನಥ
C) ಮಂದಾಕ್ರಾಂತ
D) ಕೇಕಾ

47. ಮಲಯಾಳಂನ ಮೊದಲ ಮೂಕಿ ಚಿತ್ರದ ಹೆಸರು ?
A) ವಿಗತಕುಮಾರನ್
B) ಬಾಲನ್
C) ಮಾರ್ತಾಂಡ ವರ್ಮ
D) ನೀಲಕುಯಿಲ್

48. ಮಾಪ್ಪಿಳ ಹಾಡಿನಲ್ಲಿ ಬರುವ ಮಧುರ ಲಯಬದ್ಧ ಮಾದರಿ ಯಾವುದು ?
A) ಕಳುತ್
B) ಇಶಾಲ್
C) ವಲ್ಕಂಬಿ
D) ವಾಳುಮ್ಮಾಳ್ ಕಂಬಿ

49. ಭಾರತೀಯ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್‌ಗಿಂತ ಮೊದಲು ಜನಿಸಿದ ಬ್ಯಾಟಿಂಗ್ ಲೆಜೆಂಡ್ ಯಾರು ?
A) ರವಿಶಾಸ್ತ್ರಿ
B) ಸುನಿಲ್ ಗವಾಸ್ಕರ್
C) ದಿಲೀಪ್ ವೆಂಗ್‌ಸರ್ಕಾರ್
D) ಸೌರವ್ ಗಂಗೂಲಿ

50. ಸಮಕಾಲೀನ ಕಾದಂಬರಿ ತಖ್‌ಬುರ್ನಿಯನ್ನು ಬರೆದವರು ಯಾರು ?
A) ಆರ್. ರಾಜಶ್ರೀ
B) ವಂದನಾ
C) ವಿನೋಯ್ ಥಾಮಸ್
D) ಎಸ್. ಹರೀಶ್

51. $\frac{1}{(-2)^{-2}}$ ನ ಮೌಲ್ಯವನ್ನು ಕಂಡುಹಿಡಿಯಿರಿ.
A) $\frac{1}{-4}$
B) 4
C) $\frac{1}{4}$
D) – 4

52. ಒಂದು ಸೆಕೆಂಡ್ ಎಂದರೆ ಒಂದು ಗಂಟೆಯ ಎಷ್ಟನೆಯ ದಶಮ ಭಾಗವಾಗಿದೆ ?
A) 0.000126
B) 0.0025
C) 0.00027
D) 0.00256

53. 4 ರ ಮೊದಲ ನಾಲ್ಕು ಗುಣಕಗಳ ಸರಾಸರಿ
A) 4
B) 16
C) 1
D) 10

54. ಎರಡು ಸಂಖ್ಯೆಗಳ ನಡುವಿನ ಅನುಪಾತವು 3 : 4 ಆಗಿದ್ದರೆ ಮತ್ತು ಅವುಗಳ ಗುಣಲಬ್ಧವು 1728 ಆಗಿದ್ದರೆ, ಚಿಕ್ಕ ಸಂಖ್ಯೆ
A) 36
B) 12
C) 84
D) 48

55. x ಎಂಬುದು ಧನಾತ್ಮಕ ರೇಖೀಯ ಸಂಖ್ಯೆಯಾಗಿದ್ದರೆ, $3^x + 3^{1-x}$ ನ ಕನಿಷ್ಠ ಮೌಲ್ಯ
A) 0
B) 1/3
C) 3
D) $2\sqrt{3}$

56. ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ ಸ್ಥಳದಲ್ಲಿರಬೇಕಾದ ಸಂಖ್ಯೆಯನ್ನು ಕಂಡು ಹಿಡಿಯಿರಿ.
3, 7, 23, 95, ?
A) 62 B) 128 C) 479 D) 575

57. ಖಾಲಿ ಜಾಗವನ್ನು ಭರ್ತಿ ಮಾಡಿ.
Oak : Tree : : Rose : ________
A) Leaf B) Fruit C) River D) Flower

58. ಗುಂಪಿಗೆ ಸೇರದುದನ್ನು ಕಂಡು ಹಿಡಿಯಿರಿ.
Swimming, Sailing, Driving, Diving
A) Swimming B) Driving C) Sailing D) Diving

59. ಐದು ಗಂಟೆಯನ್ನು ತೋರಿಸುವ ಗಡಿಯಾರದ ಮುಳ್ಳುಗಳ ನಡುವಿನ ಕೋನ ಎಷ್ಟು ?
A) 30° B) 60° C) 150° D) 120°

60. ಖಾಲಿ ಜಾಗವನ್ನು ಸೂಕ್ತ ಪದದಿಂದ ಭರ್ತಿಮಾಡಿ.
No one is _________ to the organisation.
A) indispansable B) indispensible C) indispensabel D) indispensable

61. ಪ್ರಾಜೆಕ್ಟ್ ಟೈಗರ್ ಬಗ್ಗೆ ಈ ಕೆಳಗಿನವುಗಳಲ್ಲಿ ಸರಿಯಾದುದನ್ನು ಆರಿಸಿ.
1. ರಾಷ್ಟ್ರೀಯ ಮಟ್ಟದಲ್ಲಿ ಹುಲಿಗಳನ್ನು ರಕ್ಷಿಸಲು 1972 ರಲ್ಲಿ ಪ್ರಾಜೆಕ್ಟ್ ಟೈಗರ್‌ಅನ್ನು ಪ್ರಾರಂಭಿಸಲಾಯಿತು.
2. ಕೇರಳದಲ್ಲಿ ಪೆರಿಯಾರ್ ಮತ್ತು ವಯನಾಡ್ ಹುಲಿ ಮೀಸಲು ಪ್ರದೇಶಗಳಾಗಿವೆ.
3. ಕೇಂದ್ರ ಪರಿಸರ ಅರಣ್ಯ ಸಚಿವರು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ.
A) 1 ಮತ್ತು 2 B) 1 ಮಾತ್ರ C) 3 ಮಾತ್ರ D) 1, 2 ಮತ್ತು 3

62. ಯಾವ ಕಾನೂನಿನ ಅಡಿಯಲ್ಲಿ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲಾಗಿದೆ ?
A) ಕೇರಳ ಅರಣ್ಯ ಕಾಯಿದೆ B) ಭಾರತೀಯ ಅರಣ್ಯ ಕಾಯಿದೆ
C) ಜೀವವೈವಿಧ್ಯ ಸಂರಕ್ಷಣಾ ಕಾಯಿದೆ D) ವನ್ಯಜೀವಿ ಸಂರಕ್ಷಣಾ ಕಾಯಿದೆ

63. ಆನೆ ಮೀಸಲು (Elephant Reserve) ಪ್ರದೇಶವನ್ನು ಕುರಿತು ಸರಿಯಾದ ಸಂಗತಿಗಳನ್ನು ಆರಿಸಿ.
1. ಕೇರಳದಲ್ಲಿ ಒಟ್ಟು 6 ಆನೆ ಮೀಸಲು ಪ್ರದೇಶಗಳಿವೆ.
2. ಆನಮುಡಿ ಅತಿದೊಡ್ಡ ಆನೆ ಮೀಸಲು ಪ್ರದೇಶವಾಗಿದೆ.
3. ನಿಲಂಬೂರ್ ಆನೆ ಮೀಸಲು ಪ್ರದೇಶವು ಮಲಪ್ಪುರಂ, ಕೋಳಿಕ್ಕೋಡ್, ವಯನಾಡ್ ಮತ್ತು ಪಾಲಕ್ಕಾಡ್ ಕಂದಾಯ ಜಿಲ್ಲೆಗಳಲ್ಲಿ ಹರಡಿಕೊಂಡಿದೆ.
A) 2 ಮತ್ತು 3 B) 1 ಮತ್ತು 2 C) 2 ಮಾತ್ರ D) 3 ಮಾತ್ರ

64. ಭಾರತದ ಮೊದಲ ಜೀವಗೋಳ ಮೀಸಲು (Biosphere Reserve) ಪ್ರದೇಶ ಯಾವುದು ?
   A) ನೀಲಗಿರಿ B) ಸುಂದರ್‌ಬನ್ಸ್ C) ನಂದಾದೇವಿ D) ಮನ್ನಾರ್ ಕೊಲ್ಲಿ

65. ಭಾರತದ ಯಾವ ರಾಜ್ಯವು ಅತಿ ಹೆಚ್ಚು ಅರಣ್ಯ ಪ್ರದೇಶವನ್ನು (Forest Cover) ಹೊಂದಿದೆ ?
   A) ಮಧ್ಯಪ್ರದೇಶ B) ಅರುಣಾಚಲ ಪ್ರದೇಶ
   C) ಒಡಿಶಾ D) ಮಹಾರಾಷ್ಟ್ರ

66. ಈ ಕೆಳಗಿನವುಗಳಲ್ಲಿ ಯಾವುದು ಜಾಗತಿಕ ತಾಪಮಾನ ಏರಿಕೆಯ ಲಕ್ಷಣಗಳಾಗಿವೆ ?
   1. ಸಮುದ್ರಮಟ್ಟ ಏರಿಕೆ
   2. ಆವಾಸಸ್ಥಾನದಲ್ಲಿನ ಬದಲಾವಣೆಗಳು
   3. ಮಂಜುಗಡ್ಡೆ ಸಂಯೋಜನೆಯಲ್ಲಿನ ಬದಲಾವಣೆಗಳು
   A) 1 ಮತ್ತು 3 B) 1 ಮತ್ತು 2 C) 1 ಮಾತ್ರ D) 1, 2 ಮತ್ತು 3

67. ಕರಿಂಪುಳ ವನ್ಯಜೀವಿ ಅಭಯಾರಣ್ಯದ ಬಗೆಗಿನ ಸರಿಯಾದ ಹೇಳಿಕೆಯನ್ನು ಆರಿಸಿ.
   1. ಕೇರಳ ಅರಣ್ಯ ಕಾಯಿದೆಯಡಿ ವಿಶೇಷ ಅಧಿಕಾರಗಳನ್ನು ಬಳಸಿಕೊಂಡು ಸರ್ಕಾರ ಇದನ್ನು ವನ್ಯಜೀವಿ ಅಭಯಾರಣ್ಯವೆಂದು ಘೋಷಿಸಿದೆ.
   2. ಚೋಳನಾಯ್ಕರರು ವಾಸಿಸುವ ಮಂಜೀರಿ ಕಾಲೋನಿಯನ್ನು ವನ್ಯಜೀವಿ ಅಭಯಾರಣ್ಯದ ಮಿತಿಯಿಂದ ಹೊರಗಿಡಲಾಗಿದೆ.
   3. ಮಲಪ್ಪುರಂ ಜಿಲ್ಲೆಯ ಹೊಸ ಅಮರಂಬಲಂ ಮೀಸಲು ಅರಣ್ಯದ ಕೆಲವು ಭಾಗಗಳನ್ನು ವನ್ಯಜೀವಿ ಅಭಯಾರಣ್ಯದಲ್ಲಿ ಸೇರಿಸಲಾಗುತ್ತಿದೆ.
   A) 1 ಮತ್ತು 2 B) 1 ಮಾತ್ರ C) 2 ಮತ್ತು 3 D) 1, 2 ಮತ್ತು 3

68. ''Don't Buy Trouble'' ಎಂಬುದು ಯಾವ ಸಂಸ್ಥೆಯ ನೇತೃತ್ವದಲ್ಲಿ ನಡೆಯುತ್ತಿರುವ ಅಭಿಯಾನವಾಗಿದೆ ?
   A) CITES B) TRAFFIC C) FAO D) UNEP

69. IUCN ವರ್ಗೀಕರಣದ ಪ್ರಕಾರ ಸಹ್ಯಾ ಪರ್ವತ ವನಗಳಲ್ಲಿ ಯಾವ ಜೀವಿಯನ್ನು ತೀವ್ರವಾಗಿ ಅಳಿವಿನಂಚಿನಲ್ಲಿದೆ ಎಂದು ವರ್ಗೀಕರಿಸಲಾಗಿದೆ ?
   1. ಮಲಬಾರ್ ಸಿವೆಟ್ (Malabar Civet)
   2. ಸಿಂಹ ಬಾಲದ ಮಕಾಕ್ (Lion Tailed Macaque)
   3. ನೀಲಗಿರಿ ಥಾರ್ (Nilgiri Thar)
   A) 1 ಮಾತ್ರ B) 1 ಮತ್ತು 2 C) 2 ಮತ್ತು 3 D) 1, 2 ಮತ್ತು 3

70. ಸಮುದಾಯ ಮೀಸಲು (Community Reserve) ಪ್ರದೇಶಕ್ಕೆ ಸಂಬಂಧಿಸಿದಂತೆ ಸರಿಯಾದವುಗಳನ್ನು ಆರಿಸಿ.
   1. ಕಡಲುಂಡಿ-ವಲ್ಲಿಕುನ್ನು ಕೇರಳದ ಮೊದಲ ಸಮುದಾಯ ಮೀಸಲು ಪ್ರದೇಶವಾಗಿದೆ.
   2. ಸಮುದಾಯ ಮೀಸಲು ಪ್ರದೇಶದ ಸ್ಥಾಪನೆಯು ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ಅನುಗುಣವಾಗಿದೆ.
   3. ಕಡಲುಂಡಿ-ವಲ್ಲಿಕುನ್ನು ಮೀಸಲು ಪ್ರದೇಶದ ವಿಸ್ತೀರ್ಣವು 1.5 ಚದರ ಕಿಲೋಮೀಟರ್ ಆಗಿದೆ.
   A) 1 ಮತ್ತು 2 B) 1 ಮತ್ತು 3 C) 1 ಮಾತ್ರ D) 1, 2 ಮತ್ತು 3

71. ಈ ಕೆಳಗಿನ ದಿನಾಚರಣೆಗಳ ಕುರಿತು ಸರಿಯಾದ ಹೊಂದಾಣಿಕೆಗಳನ್ನು ಆಯ್ಕೆಮಾಡಿ.

| | |
|---|---|
| i. ಜನವರಿ 5 | a. ಅಂತಾರಾಷ್ಟ್ರೀಯ ಓಝೋನ್ ದಿನ |
| ii. ಏಪ್ರಿಲ್ 22 | b. ರಾಷ್ಟ್ರೀಯ ಪಕ್ಷಿ ದಿನ |
| iii. ಸೆಪ್ಟೆಂಬರ್ 16 | c. ಅಂತಾರಾಷ್ಟ್ರೀಯ ಜೈವಿಕ ವೈವಿಧ್ಯ ದಿನ |
| iv. ಮೇ 22 | d. ಭೂಮಿ ದಿನ |

A) i – a, ii – c, iii – d, iv – b
B) i – b, ii – d, iii – a, iv – c
C) i – c, ii – a, iii – d, iv – b
D) i – c, ii – d, iii – b, iv – a

72. ಈ ಕೆಳಗಿನ ಕಾನೂನುಗಳು ಮತ್ತು ಅವುಗಳನ್ನು ಜಾರಿಗೆ ತಂದ ವರ್ಷಗಳ ಸರಿಯಾದ ಸಂಯೋಜನೆಯೊಂದಿಗೆ ಆರಿಸಿ.

| | |
|---|---|
| i. ಭಾರತೀಯ ಅರಣ್ಯ ಕಾಯಿದೆ | a. 1961 |
| ii. ವನ್ಯಜೀವಿ ಸಂರಕ್ಷಣಾ ಕಾಯಿದೆ | b. 1927 |
| iii. ಕೇರಳ ಅರಣ್ಯ ಕಾಯಿದೆ | c. 1980 |
| iv. ಅರಣ್ಯ ಸಂರಕ್ಷಣಾ ಕಾಯಿದೆ | d. 1972 |

A) i – b, ii – d, iii – a, iv – c
B) i – c, ii – a, iii – d, iv – b
C) i – c, ii – d, iii – b, iv – a
D) i – d, ii – c, iii – b, iv – a

73. ಕೇರಳದ ಮೊದಲ ಮೀಸಲು ಅರಣ್ಯ ಯಾವುದು ?
A) ನಿಲಂಬೂರ್
B) ಕೊನ್ನಿ
C) ನೆಲ್ಲಿಯಂಪತಿ
D) ಪೆರಿಯಾರ್

74. ಆಪರೇಷನ್ ''Thunder 2023'' ಕಾರ್ಯಾಚರಣೆಯನ್ನು ಯಾವುದಕ್ಕಾಗಿ ನಡೆಸಲಾಯಿತು ?
A) ಭಾರತದಲ್ಲಿ ಹುಲಿ ಚರ್ಮದ ವ್ಯಾಪಾರಿಗಳನ್ನು ಹಿಡಿಯಲು
B) ಅಂತರ ರಾಜ್ಯ ಆನೆಗಳ ಕಳ್ಳಸಾಗಣೆಯನ್ನು ಬಂಧಿಸಲು
C) ಅಂತಾರಾಷ್ಟ್ರೀಯ ವನ್ಯಜೀವಿ ಕಳ್ಳಸಾಗಣೆ ಪತ್ತೆಹಚ್ಚಲು ಮತ್ತು ಅದರ ವಿರುದ್ಧ ಕ್ರಮ ಕೈಗೊಳ್ಳಲು
D) ತೀವ್ರವಾಗಿ ಅಳಿವಿನಂಚಿನಲ್ಲಿರುವ ವನ್ಯಜೀವಿಗಳನ್ನು ಗುರುತಿಸಲು

75. ವಿಶ್ವ ಪರಿಸರ ದಿನಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಿಂದ ಸರಿಯಾದುದನ್ನು ಆರಿಸಿ.
A) UNEP ಪ್ರಕಟಣೆಯ ಪ್ರಕಾರ ಸೌದಿ ಅರೇಬಿಯಾ 2024 ರ ವಿಶ್ವ ಪರಿಸರ ಸಮ್ಮೇಳನವನ್ನು ಆಯೋಜಿಸುತ್ತದೆ
B) UNEP 2021 ರಿಂದ 2030 ರವರೆಗೆ ಪರಿಸರ ಮರುಸ್ಥಾಪನೆಯ ದಶಕವನ್ನು ಆಚರಿಸುತ್ತಿದೆ
C) 1972 ರಲ್ಲಿ UN ಜನರಲ್ ಅಸೆಂಬ್ಲಿಯು ಜೂನ್ 5 ಅನ್ನು ವಿಶ್ವ ಪರಿಸರ ದಿನವನ್ನಾಗಿ ಆಚರಿಸಲು ನಿರ್ಧರಿಸಿತು
D) ಮೇಲಿನ ಎಲ್ಲವೂ

76. ಈ ಕೆಳಗಿನವುಗಳಲ್ಲಿ ಪ್ರಾಜೆಕ್ಟ್ ಎಲಿಫೆಂಟ್ (Project Elephant) ಅನ್ನು ರೂಪಿಸುವ ಉದ್ದೇಶಗಳು ಯಾವುವು ಎಂಬುದನ್ನು ಕಂಡುಹಿಡಿಯಿರಿ.
   i. ಕಾಡಾನೆಗಳು, ಅವುಗಳ ಆವಾಸಸ್ಥಾನಗಳು ಮತ್ತು ಕಾರಿಡಾರ್‌ಗಳನ್ನು ರಕ್ಷಿಸುವುದು.
   ii. ವನ್ಯಜೀವಿ ಸಂರಕ್ಷಣೆಯಲ್ಲಿ ಮಾನವನಿಂದ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸುವುದು.
   iii. ಸ್ಥಳೀಯ ಆನೆಗಳ ಕಲ್ಯಾಣವನ್ನು ಖಚಿತಪಡಿಸಿಕೊಳ್ಳುವುದು.
   A) i, ii
   B) i, iii
   C) i ಮಾತ್ರ
   D) i, ii ಮತ್ತು iii

77. ಕೆಂಪು ದತ್ತಾಂಶ ಪುಸ್ತಕ (Red data book) ದಲ್ಲಿ ಕಪ್ಪು ಸಂಕೇತದಿಂದ ಯಾವ ರೀತಿಯ ಜಾತಿಗಳನ್ನು ಸೂಚಿಸಲಾಗುತ್ತದೆ ?
   A) ಅಳಿದುಹೋದ ಪ್ರಭೇದಗಳು
   B) ಅಳಿವಿನಂಚಿನಲ್ಲಿರುವ ಪ್ರಭೇದಗಳು
   C) ವಿಶೇಷ ಪರಿಗಣನೆಯ ಅಗತ್ಯವಿಲ್ಲದ ಪ್ರಭೇದಗಳು
   D) ಆಕ್ರಮಣಕಾರಿ ಪ್ರಭೇದಗಳು

78. ಭಾರತೀಯ ವನ್ಯಜೀವಿ ಸಂಸ್ಥೆಯ ಪ್ರಧಾನ ಕಚೇರಿ ಎಲ್ಲಿದೆ ?
   A) ಹೈದರಾಬಾದ್
   B) ಕೋಲ್ಕತ್ತಾ
   C) ಮುಂಬೈ
   D) ಡೆಹ್ರಾಡೂನ್

79. ಉದ್ಯೋಗಿಗಳ ಸೂಕ್ಷ್ಮ ವೈಯಕ್ತಿಕ ಮಾಹಿತಿಯನ್ನು ನಿರ್ವಹಿಸಿದ ಕಾರ್ಪೊರೇಟ್ ಸಂಸ್ಥೆಯು ಆ ಮಾಹಿತಿಯನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯವಹಿಸಿದ್ದು, ಉದ್ಯೋಗಿಗಳಿಗೆ ನಷ್ಟವನ್ನುಂಟುಮಾಡಿದೆ. ಡೇಟಾವನ್ನು ರಕ್ಷಿಸಲು ವಿಫಲವಾದ ಕಾರಣಕ್ಕಾಗಿ ಉದ್ಯೋಗಿಗಳು ಆ ಸಂಸ್ಥೆಯಿಂದ ಪರಿಹಾರವನ್ನು ಪಡೆಯಬಹುದೇ ?
   A) ಇಲ್ಲ, ಮಾಹಿತಿ ತಂತ್ರಜ್ಞಾನ ಕಾಯಿದೆಯ ಸೆಕ್ಷನ್ 44 ರ ಅಡಿಯಲ್ಲಿ ಮಾತ್ರ ಕಾರ್ಪೊರೇಟ್ ಸಂಸ್ಥೆಯನ್ನು ಕ್ರಿಮಿನಲ್ ಹೊಣೆಗಾರನನ್ನಾಗಿ ಮಾಡಬಹುದು
   B) ಇಲ್ಲ, ಮಾಹಿತಿ ತಂತ್ರಜ್ಞಾನ ಕಾಯಿದೆಯ ಸೆಕ್ಷನ್ 43 ಎ ಅಡಿಯಲ್ಲಿ ಮಾತ್ರ ಕಾರ್ಪೊರೇಟ್ ಸಂಸ್ಥೆಯನ್ನು ಕ್ರಿಮಿನಲ್ ಹೊಣೆಗಾರನನ್ನಾಗಿ ಮಾಡಬಹುದು
   C) ಹೌದು, ಮಾಹಿತಿ ತಂತ್ರಜ್ಞಾನ ಕಾಯಿದೆಯ ಸೆಕ್ಷನ್ 43 ಎ ಅಡಿಯಲ್ಲಿ ಪರಿಹಾರವನ್ನು ಪಾವತಿಸಲು ಕಾರ್ಪೊರೇಟ್ ಸಂಸ್ಥೆಯನ್ನು ಹೊಣೆಗಾರನನ್ನಾಗಿ ಮಾಡಲಾಗುತ್ತದೆ
   D) ಹೌದು, ಮಾಹಿತಿ ತಂತ್ರಜ್ಞಾನ ಕಾಯಿದೆಯ ಸೆಕ್ಷನ್ 44 ರ ಅಡಿಯಲ್ಲಿ ಪರಿಹಾರವನ್ನು ಪಾವತಿಸಲು ಕಾರ್ಪೊರೇಟ್ ಸಂಸ್ಥೆಯನ್ನು ಹೊಣೆಗಾರನನ್ನಾಗಿ ಮಾಡಲಾಗುತ್ತದೆ

80. ಈ ಕೆಳಗಿನವುಗಳನ್ನು ಮಾಹಿತಿ ತಂತ್ರಜ್ಞಾನ ಕಾಯಿದೆಯೊಂದಿಗೆ ಹೊಂದಿಸಿ.

| | |
|---|---|
| 1. ಸೆಕ್ಷನ್ 66C | i. ಗುರುತಿನ (Identity) ಕಳ್ಳತನಕ್ಕಾಗಿ ಶಿಕ್ಷೆ |
| 2. ಸೆಕ್ಷನ್ 66E | ii. ಸೈಬರ್ ಭಯೋತ್ಪಾದನೆಗಾಗಿ ಶಿಕ್ಷೆ |
| 3. ಸೆಕ್ಷನ್ 66F | iii. ಗೌಪ್ಯತೆಯನ್ನು ಉಲ್ಲಂಘಿಸಿದ್ದಕ್ಕಾಗಿ ಶಿಕ್ಷೆ |

   A) 1 – i, 2 – iii, 3 – ii
   B) 1 – ii, 2 – i, 3 – iii
   C) 1 – iii, 2 – ii, 3 – i
   D) 1 – iii, 2 – i, 3 – ii

81. Either you or I _______ to choose the post.
A) are B) am C) was D) were

82. The passive form of ‘you need not submit the document’.
A) The document need not submit
B) The document need to be submitted
C) The document need not be submitted
D) None of the above

83. They were not ashamed ________ hug each other.
A) to B) about C) of D) off

84. “Get ready for the descent” is an example of
A) Imperative sentence B) Exclamatory sentence
C) Interrogative sentence D) Declarative sentence

85. She will ________ the position of a manager tomorrow.
A) take in B) take out C) take after D) take up

86. Choose the correctly spelt word.
A) Manoevure B) Manoeuver C) Manoeuvre D) Maneouvre

87. If I knew her address, I _______ a letter to her.
A) wrote B) could written
C) could write D) could have written

88. Synonyms of succumb.
i) yield ii) relent iii) revolt iv) conquer
A) i, ii and iii B) Both iii and iv
C) Both i and ii D) All the above

89. I asked him “Can you join the team today”. Change the sentence into reported speech.
A) I asked him if he can join the team today.
B) I asked him that can he join the team that day.
C) I asked him if he joined the team on that day.
D) I asked him if he could join the team on that day.

90. The idiom stands for ‘stop avoiding the main issue and speak directly’.
A) Break a leg B) Bite the bullet
C) Beat around the bush D) Beat a dead horse

91. ‘ಕಾಡು’ ಪದಕ್ಕೆ ಸಮಾನಾರ್ಥ ಪದ

A) ಅರಣ್ಯ B) ಆಕಾಶ C) ನಾಡು D) ಸಾಗರ

92. ಹೂ + ತೋಟ – ಹೂದೋಟ ಇಲ್ಲಿ ಕಂಡು ಬರುವ ಸಂಧಿ

A) ಆಗಮ ಸಂಧಿ B) ಲೋಪ ಸಂಧಿ
C) ಆದೇಶ ಸಂಧಿ D) ಸವರ್ಣ ದೀರ್ಘ ಸಂಧಿ

93. ಇವುಗಳಲ್ಲಿ ಕನ್ನಡ ಪದ ಯಾವುದು ?

A) ಜಮೀನು B) ಪೊಲೀಸು C) ಕಚೇರಿ D) ಬಯಲು

94. ಕೆಳಗಿನ ಪದಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.

A) ಸೌಭಾಗ್ಯ B) ಸೌಬಾಗ್ಯ C) ಸೌಬ್ಭಾಗ್ಯ D) ಸೌಬಗ್ಯ

95. ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.

A) ಸಪ್ಪೆಯಾಗು B) ಗೋಚರವಾಗು
C) ಲಲನೆಯೊಬ್ಬಳು D) ಯಾರಿಗಾದರೂ

96. ‘ಕರ್ಣಾಟಕ ಕೃಷ್ಣರಾಯ ಭಾರತ ಕಥಾಮಂಜರಿ’ ಎಂಬ ಕೃತಿಯನ್ನು ರಚಿಸಿದವರು

A) ತಿಮ್ಮಣ್ಣಕವಿ B) ಕುಮಾರವ್ಯಾಸ C) ಪಂಪ D) ಹರಿಹರ

97. ಶಾಂತಿಶಶಿ – ಇಲ್ಲಿ ಕಂಡು ಬರುವ ಅಲಂಕಾರ

A) ಉಪಮಾಲಂಕಾರ B) ರೂಪಕಾಲಂಕಾರ
C) ಉತ್ಪ್ರೇಕ್ಷಾಲಂಕಾರ D) ಅರ್ಥಾಂತರನ್ಯಾಸಾಲಂಕಾರ

98. ದುಂಡುದುಂಡಾಗಿ ಎಂಬುದು ಒಂದು ______________ ಪದವಾಗಿದೆ.

A) ದ್ವಿರುಕ್ತಿ B) ನಾಮಪದ C) ಕ್ರಿಯಾಪದ D) ವಿಭಕ್ತಿ

99. ‘ಕಣ್ಣನ್ನು ಮಾರಿದೆನು’ ಈ ನುಡಿಗಟ್ಟಿನ ಅರ್ಥವೇನು ?

A) ಸುಸ್ತಾಗು B) ಮೈಮರೆಯು C) ಕನಸುಕಾಣು D) ನಿದ್ರೆಮಾಡು

100. ‘Distant hill looks smooth’ ಇದರ ಅರ್ಥ

A) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ B) ದೂರದ ಬೆಟ್ಟ ಕಣ್ಣಿಗೆ ಕಾಣುದಿಲ್ಲ
C) ದೂರದ ಬೆಟ್ಟ ಕಣ್ಣಿಗೆ ಕಾಣುತ್ತದೆ D) ದೂರದ ಬೆಟ್ಟ ಕಣ್ಣಿಗೆ ಅಂದವಾಗಿ ಕಾಣುದಿಲ್ಲ

## Space for Rough Work